# ಘಟಿಕೋತ್ಸವದಲ್ಲಿ ಖಾದಿ ಖದರ್!

■ ಚಿತ್ರ- ಬರಹ: ವಿಜಯ್ ಹೆಮ್ಮಿಗೆ

ಸುಮಾರು ನಾಲ್ಕು ದಶಕಗಳ ಹಿಂದಿನ ಮಾತು. ವಿಶ್ವವಿದ್ಯಾನಿಲಯದ ಘಟಿಕೋತ್ಸವವೆಂದರೆ, ತಲೆಗೊಂದು ಹುಡ್, ನೀಳಕಾಯದ ಗವನ್ ಧರಿಸಿ ಘಟಿಕೋತ್ಸವಕ್ಕೆ ಹೋಗಿ, ವಾಪಸ್ಸು ಬರುವಾಗ ಫೋಟೋ ಸ್ಟುಡಿಯೋದಲ್ಲಿ ಕೈಗೆ ಒಂದು ಬಿಳಿಯ ಪೇಪರ್ ರೋಲ್ ಇರಿಸಿಕೊಂಡು ಫೋಟೋ ತೆಗೆಸಿಕೊಳ್ಳುವ ಮಜವೇ ಬೇರೆ ಇತ್ತು. ಅಂಥಹ ಫೋಟೋಗಳನ್ನು ಇಂದಿಗೂ ನಾವು ಕೆಲವು ಹಳೆಯ ಮನೆಗಳಲ್ಲಿ ನೋಡಬಹುದು. ಹಾಗೆ ಗವನ್ ತೊಟ್ಟು ಪದವೀಧರರಾದ ಖುಷಿ ಮನೆಯ ಮಂದಿಗೆಲ್ಲ ಇತ್ತು.

ಇದಾದ ಕೆಲವು ವರ್ಷಗಳಲ್ಲಿ ದಿಢೀರ್ ಎಂದು ಗವನ್ ಮತ್ತು ಹುಡ್ ಕಾಣೆಯಾಗಿ ಹೋಗಿತ್ತು. ನಂತರದಲ್ಲಿ ಶಿಕ್ಷಣದಲ್ಲಿ ಹಲವಾರು ಕ್ರಾಂತಿಕಾರದ ಸುಧಾರಣೆಗಳು ಬಂದು ಇದೀಗ ದೇಶದಲ್ಲೆಡೆ ಹಲವಾರು ಖಾಸಗಿ, ಡೀಮ್ಡ್ ವಿಶ್ವವಿದ್ಯಾನಿಲಯಗಳು ತಲೆ ಎತ್ತಿ ನಿಂತಿವೆ. ಈ ಎಲ್ಲಾ ವಿಶ್ವವಿದ್ಯಾನಿಲಯಗಳ ನಡುವೆ ಮೈಸೂರಿನಲ್ಲಿರುವ ಜೆ.ಎಸ್.ಎಸ್. ವಿಶ್ವವಿದ್ಯಾನಿಲಯ ವಿಭಿನ್ನವೂ ವಿಶಿಷ್ಟವೂ ಆಗಿದೆ. 2008 ನೆ ಇಸವಿಯಲ್ಲಿ ಪ್ರಾರಂಭವಾದ ಈ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಕೂಡ ವಿಭಿನ್ನವಾಗಿರುವುದು ವಿಶೇಷ.



ವಿಶ್ವವಿದ್ಯಾನಿಲಯ ಧನಸಹಾಯ ಅಯೋಗದ ಕಲಂ 3 ರಡಿಯಲ್ಲಿ 2008 ರಲ್ಲಿ ಸ್ಥಾಪಿತವಾದ ಜೆಎಸ್‌ಎಸ್ ವಿಶ್ವವಿದ್ಯಾನಿಲಯವು ವೈದ್ಯಕೀಯ, ದಂತವೈದ್ಯಕೀಯ ಮತ್ತು ಔಷಧ ವಿಜ್ಞಾನದಲ್ಲಿ ಸ್ನಾತಕ/ ಸ್ನಾತಕೋತ್ತರ ಮತ್ತು ಡಿಪ್ಲೊಮೊ ಪದವಿಗಳನ್ನು ನೀಡುತ್ತಾ ಬಂದಿದೆ. ಇದುವರೆಗೂ ಏಳು ಘಟಿಕೋತ್ಸವಗಳನ್ನು ಆಚರಿಸಿಕೊಂಡ ಈ ವಿವಿಯಲ್ಲಿ ಖಾದಿಮಯ ಘಟಿಕೋತ್ಸವ ನಡೆಯುತ್ತಿದೆ!

ಸರಳತೆ, ದೇಸಿತನ, ಮತ್ತು ಸ್ವಾವಲಂಬನೆಯ ಸಂಕೇತವೇ ಖಾದಿಯದ್ದು. ಸ್ವಾತಂತ್ರ್ಯ ಸಂಗ್ರಾಮದ ಸಂದರ್ಭದಲ್ಲಿ ಜನರ ಅಚ್ಚುಮೆಚ್ಚಿನ ಬಟ್ಟೆಯಾಗಿದ್ದ ಖಾದಿ, ದೇಶಪ್ರೇಮದ ದ್ಯೋತಕವೂ ಆಗಿತ್ತು. ಇತ್ತೀಚೆಗೆ ನಟ ನಟಿಯರ, ವಿದೇಶಿಗರ ಹೊಸ ಹೊಸ ವಿನ್ಯಾಸದಲ್ಲಿ ರಾರಾಜಿಸುತ್ತಿರುವ ಖಾಡಿ ಎಲ್ಲೆಡೆ ದೊರೆಯುತ್ತಿದೆ. ಇದಲ್ಲದೆ ಕೆಲವು ರಾಜ್ಯ ಸರ್ಕಾರಗಳು ಖಾದಿಯನ್ನು ವಸ್ತ್ರ ಸಂಹಿತೆಯನ್ನಾಗಿಯೂ ಮಾಡಿವೆ. ರೈಲ್ವೆ ಇಲಾಖೆಯಲ್ಲಿಯೂ ಖಾದಿಯನ್ನು ಬಳಸಲಾಗುತ್ತಿದೆ. ರಾಜಸ್ಥಾನದಲ್ಲಿನ ಪಾಲಿಕೆ ನೌಕರರು ಬಳಸುತ್ತಿದ್ದಾರೆ.

ಇಂಥಹ ಖಾದಿಯನ್ನು ಮೈಸೂರಿನ ಜೆ.ಎಸ್.ಎಸ್. ವಿಶ್ವವಿದ್ಯಾನಿಲಯವು ತನ್ನ ವಿದ್ಯಾರ್ಥಿಗಳ ಘಟಿಕೋತ್ಸವದ ಸಮವಸ್ತ್ರವನ್ನಾಗಿ ಮಾಡಿದೆ. 2008 ರಲ್ಲಿ ನಡೆದ ಈ ವಿವಿಯ ಮೊಟ್ಟ ಮೊದಲ ಘಟಿಕೋತ್ಸವದಲ್ಲಿ ಮುಖ್ಯ ಅತಿಥಿಗಳಾಗಿ ಘಟಿಕೋತ್ಸವ ಭಾಷಣ ಮಾಡಿದ ಭಾರತದ ಮಾಜಿ ರಾಷ್ಟ್ರಪತಿಗಳಾದ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ರವರು ಖಾದಿ ಬಟ್ಟೆಯ ಮೆರುಗಿಗಿಂತ, ಅದರ ಹಿಂದಿನ ಪವಿತ್ರ ಉದ್ದೇಶವನ್ನು ಅರಿತುಕೊಳ್ಳುವಲ್ಲಿ, ದೇಸಿ ಸಂಸ್ಕೃತಿಯನ್ನು ಬಡೆದೆಬ್ಬಿಸುತ್ತಾ, ಮನದ ಕೊಳೆ ತೊಳೆಯುವಲ್ಲಿ ಈ ಖಾದಿಯ ಆವಿಷ್ಕಾರ ನಿಜಕ್ಕೂ ಸ್ವಾಗತಾರ್ಹ ಎಂದಿದ್ದರು. ಈ ನಂತರ ಘಟಿಕೋತ್ಸವಕ್ಕೆ ಮುಖ್ಯ ಅತಿಥಿಗಳಾಗಿ ಬಂದ ಎಲ್ಲ ಗಣ್ಯರೂ ಇಲ್ಲಿನ ಖಾದಿ ಪ್ರೇಮವನ್ನು ಪ್ರಶಂಸೆಗೈದಿದ್ದಾರೆ.

ಈ ವಿವಿಯಲ್ಲಿ ಬರಿಯ ವಿದ್ಯಾರ್ಥಿಗಳಿಗಷ್ಟೆ ಅಲ್ಲ, ವಿವಿಯ ಶೈಕ್ಷಣಿಕ ಮಂಡಳಿ ಸದಸ್ಯರಿಗೆ, ಸಿಂಡಿಕೇಟ್ ಸದಸ್ಯರಿಗೆ, ಕೂಡಾ ಖಾದಿಯ ದಿರಿಸು ಕಡ್ಡಾಯವಾಗಿದ್ದು, ಅವರುಗಳು ಖಾದಿ ಕೋಟಿನ ಮೇಲೆ ಶಲ್ಯವನ್ನು ಕೂಡ ಹೊದೆಯಬೇಕು. ಶಲ್ಯದ ದೊಡ್ಡ ಅಂಚು ಅವರ ಸದಸ್ಯರನ್ನು ಗುರುತಿಸಿದರೆ, ಸಣ್ಣ ಅಂಚಿನ ಶಲ್ಯ ವಿದ್ಯಾರ್ಥಿಗಳಿಗಿದೆ. ಹಸಿರು ಬಣ್ಣದ ಖಾದಿ ಕೋಟು, ಫಾರ್ಮಸಿ ವಿದ್ಯಾರ್ಥಿಗಳಿಗಾದರೆ, ಕೆಂಪು ಬಣ್ಣ ವೈದ್ಯಕೀಯ ಮತ್ತು ದಂತ ವೈದ್ಯಕೀಯ ವಲ್ಲದೆ ಸಂಶೋಧನಾ ವಿದ್ಯಾರ್ಥಿಗಳಿಗೂ ಶಲ್ಯದ ದೊಡ್ಡ ಅಂಚಿರುವುದು ವಿಶೇಷ.

'ಪ್ರಸಕ್ತ ವಿವಿಯಡಿಯಲ್ಲಿ ಜೀವ ವಿಜ್ಞಾನ ನಿಕಾಯ ಮತ್ತು ಆರೋಗ್ಯ ವಿಜ್ಞಾನ ನಿರ್ವಹಣೆಯಲ್ಲಿ ಎಂಬಿಎ ಪದವಿಗಳು ಕೂಡಾ ಇದ್ದು, ಈ ವಿದ್ಯಾರ್ಥಿಗಳಿಗೆ ನೀಲಿ, ಕಿತ್ತಳೆ ಮತ್ತಿತರ ಹೊಸ ಬಣ್ಣದ ಖಾದಿಯ ಬಗ್ಗೆ ಆಲೋಚಿಸಲಾಗುತ್ತಿದೆ' ಎನ್ನುತ್ತಾರೆ ವಿವಿಯ ಪರೀಕ್ಷಾ ನಿಯಂತ್ರಣಾಧಿಕಾರಿ, ಲೆ.ಕ. ಡಾ. ವಿಜಯಸಿಂಹ.

ಈಗಾಗಲೇ ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಇಲಾಖೆಯ ಎನ್.ಐ.ಆರ್.ಎಫ್ ಸಂಸ್ಥೆ ನಡೆಸಿದ ಮೋಜಣಿಯಲ್ಲಿ ದೇಶದ 100 ಪ್ರತಿಷ್ಠಿತ ವಿವಿಗಳ ಪೈಕಿ ಜೆಎಸ್‌ಎಸ್ ವಿವಿ, 35ನೆಯ ಸ್ಥಾ ಪಡೆದಿರುವುದು ಹೆಗ್ಗಳಿಕೆ ಕೂಡಾ. ಸುತ್ತೂರು ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಯವರು ಕುಲಾಧಿಪತಿಗಳಾಗಿರುವ ಮತ್ತು ಭಾರತೀಯ ಔಷಧ ಮಂಡಳಿಯ ಅಧ್ಯಕ್ಷರೂ ಆಗಿರುವ ಡಾ ಸುರೇಶ್ ರವರು ಕುಲಪತಿಗಳಾಗಿರುವ ಈ ವಿಶ್ವವಿದ್ಯಾಲಯ ಖಾದಿಗೂ ಒಂದು ಘನತೆ ತಂದುಕೊಟ್ಟಿರುವುದು ಸುಳ್ಳಲ್ಲ. ■

(ಅನಿವಾರ್ಯ ಕಾರಣದಿಂದ 'ಸುಖೀ ದಾಂಪತ್ಯ' ಪ್ರಕಟವಾಗಿಲ್ಲ – ಸಂ)